**<u>ಸಾಕ್ಷಿಯನ್ನು ದಿನಾಂಕಃ 16-01-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ</u>**

ದಾವಾ ಆಸ್ತಿಯ ಸರ್ವೆ ನಂ. 135 ಇರುವುದು. ಅದರ ವಿಸ್ತೀರ್ಣ 6 ಎಕರೆ 56 ಸೆಂಟ್ಸ್ ಇರುವುದು. ದಿಃ20.10.1961 ರಂದು ದಾವಾ ಆಸ್ತಿಯನ್ನು ಒಟ್ಟುಕುಟುಂಬದ ಆದಾಯದಿಂದ ಹುಸೇನ್ ಬೀ, ಹೊಳ್ಳಿಕೊಪ್ಪದ ಖಾಸಿಂಸಾಬ್ ರವರು ಖರೀದಿ ಮಾಡಿರುವ ಆಸ್ತಿಯಾಗಿರುವುದು ಎಂದರೆ ಸರಿ. ಸದರಿ ಹೊಳ್ಳಿಕೊಪ್ಪದ ಖಾಸಿಂಸಾಬ್ ರವರು ಮೃತಪಟ್ಟ ನಂತರ ಇಮಾಮ್ ಸಾಬ್ ಹಾಗೂ ಇಮಾಮ್ಆದಿ ಸಾಬ್ ರವರು ಮನೆಯ ಯಜಮಾನಿಕೆಯನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ಹೊಳ್ಳಿಕೊಪ್ಪದ ಖಾಸಿಂಸಾಬ್ ರವರಿಗೆ ಸಂಬಂಧಿಸಿದ ಇತರ ಆಸ್ತಿಗಳು ನನ್ನ ತಂದೆ ಹಾಗೂ ಚಿಕ್ಕಪ್ಪನ ಹೆಸರಿನಲ್ಲಿರುವುದು ಎಂದರೆ ಸರಿ. ಇಂದಿನವರೆಗೂ ಕೂಡ ದಾವಾ ಆಸ್ತಿಯನ್ನು ಹೊರತುಪಡಿಸಿಇತರ ಆಸ್ತಿಗಳು ನನ್ನ ತಂದೆ ಹಾಗೂ ಚಿಕ್ಕಪ್ಪನ ಹೆಸರಿನಲ್ಲಿ ಇದೆ ಎಂದರೆ ಸರಿ.

ನನ್ನ ಅಜ್ಜನಾದ ಹೊಳ್ಳಿಕೊಪ್ಪದ ಖಾಸಿಂಸಾಬ್ ರವರಿಗೆ ಒಟ್ಟು 8 ಜನ ಗಂಡು ಮಕ್ಕಳು ಹಾಗೂ ಒಬ್ಬಾಕೆ ಹೆಣ್ಣುಮಗಳು ಎಂದರೆ ಸರಿ. ಇಮಾಮ್ ಹುಸೇನ್ ಸಾಬ್, ಬುಡೇನ್ ಸಾಬ್, ಇಬ್ರಾಹಿಂ ಸಾಬ್, ಕರೀಂ ಸಾಬ್, ಫಾತೀಮಾ ಬೀ, ಹುಸೇನ್ ಸಾಬ್, ಸತ್ತರ್ ಸಾಬ್, ಇಮಾಮ್ ಅಲಿ ಸಾಬ್ ಮತ್ತು ಇಮಾಮ್ ಸಾಬ್ ಇವರೆಲ್ಲರೂ ನನ್ನ ಅಜ್ಜನಾದ ಹೊಳ್ಳಿಕೊಪ್ಪದ ಖಾಸಿಂಸಾಬ್ ರವರ ಮಕ್ಕಳು ಎಂದರೆ ಸರಿ. ಹೊಳ್ಳಿಕೊಪ್ಪದ ಖಾಸಿಂಸಾಬ್ ರವರು ಮೃತಪಟ್ಟ ನಂತರ ಅವರ ಮೇಲೆ ಹೇಳಿದ ಮಕ್ಕಳು ಮೌಖಿಕವಾಗಿ ಪಾಲುವಿಭಾಗವನ್ನು ಮಾಡಿಕೊಂಡು ಅವರವರ ಹಿಸ್ಸೆಯಲ್ಲಿ ಸ್ವಾಧೀನ ಇರುವರು ಎಂದರೆ ಸರಿ. ಮೌಖಿಕ ಪಾಲು ವಿಭಾಗದಲ್ಲಿ ದಾವಾ ಆಸ್ತಿಯ ಒಟ್ಟು ವಿಸ್ತೀರ್ಣದ ಪೈಕಿ 70 ಸೆಂಟ್ಸ್ ಇದು 1ನೇ ವಾದಿಯ ಗಂಡನಾದ ಇಮಾಮ್ ಸಬ್ ರವರ ಹಿಸ್ಸೆಗೆ ಬಂದಿರುತ್ತದೆ ಸಾಕ್ಷಿಯು ಆ ಸರ್ವೇ ನಂಬರಿಗೂ ಈ ದಾವಾ ಆಸ್ತಿಗೂ ಸಂಬಂಧ ಇಲ್ಲ ಎಂದು ನುಡಿದರು.

ಮೌಖಿಕ ಪಾಲು ವಿಭಾಗದಲ್ಲಿ 1ನೇ ಪ್ರತಿವಾದಿಯ ಗಂಡನಾದ ಇಮಾಮ್ ಸಾಬ್ ರವರ ಹಿಸ್ಸೆಗೆ ಬಂದ 70 ಸೆಂಟ್ಸ್ ಹೊಲದ ಪೂರ್ವಕ್ಕೆ ಭೀಮಪ್ಪನ ಜಮೀನು, ಪಶ್ಚಿಮಕ್ಕೆ ಪ್ರತಿವಾದಿಗಳ ಹಿಸ್ಸೆಗೆ ಬಂದ ಜಮೀನು, ಉತ್ತರಕ್ಕೆ ತಳವಾರ್ ಬಿಜ್ಜಪ್ಪರವರ ಜಮೀನು ಹಾಗೂ ದಕ್ಷಿಣಕ್ಕೆ ಕೊಡಿಹಳ್ಳಿ ಕೊಟ್ಟಿ ಮಲ್ಲಪ್ಪನ ಜಮೀನು ಇರುವುದು ಎಂದರೆ ಸರಿಯಲ್ಲ.

ದಾವಾ ಜಮೀನಿನ 6 ಎಕರೆ 50 ಸೆಂಟ್ಸ್ ಪೈಕಿ 1 ಎಕರೆ 80 ಸೆಂಟ್ಸ್ ಇದು ಪ್ರತಿವಾದಿಗಳ ತಂದೆಯಾದ ಕರೀಂ ಸಾಬ್ ಇವರಿಗೆ ಮೌಖಿಕ ಪಾಲುವಿಭಾಗದಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಪೂರ್ವಕ್ಕೆ 2 ನೇ ವಾದಿಯ ಜಮೀನು ಇರುವುದು ಎಂದರೆ ಸರಿಯಲ್ಲ. ಪಶಶ್ಚಿಮಕ್ಕೆ ಫಾತೀಮಾ ಬೀ ರವರ ಜಮೀನು ಇದೆ ಎಂದರೆ ಸರಿಯಲ್ಲ. ಉತ್ತರಕ್ಕೆ ತಳವಾರ ಬಿಜ್ಜಪ್ಪರವರ ಜಮೀನು ಇದೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಕೊಡಿ ಹಳ್ಳಿ ಕೊಟ್ಟಿ ಮಂಜಪ್ಪನ ಜಮೀನು ಇರುವುದು ಎಂದರೆ ಸರಿಯಲ್ಲ. ನನ್ನ ಅತ್ತೆಯಾದ ಫಾತೀಮಾ ಬೀ ಇವರ ಹಿಸ್ಸೆಗೆ 1 ಎಕರೆ 10 ಸೆಂಟ್ಸ್ 6 ಎಕರೆ 50 ಸೆಂಟ್ಸ್ ಪೈಕಿ ಮೌಖಿಕವಾಗಿ ಬಂದಿರುವುದು ಎಂದರೆ ಸರಿಯಲ್ಲ. ಅದರ ಪೂರ್ವಕ್ಕೆ ಪ್ರತಿವಾದಿಗಳ ತಂದೆಗೆ ಬಂದ 1 ಎಕರೆ 80 ಸೆಂಟ್ಸ್ ಜಮೀನು ಇರುವುದು ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ಮರಿಯಾಮ್ ಬೀ ರವರ ಜಮೀನು ಇದೆ ಎಂದರೆ ಸರಿಯಲ್ಲ. ಉತ್ತರಕ್ಕೆ ತಳವಾರ ಬಿಜ್ಜಪ್ಪರವರ ಜಮೀನು ಇದೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಕೊಡಿ ಹಳ್ಳಿ ಕೊಟ್ಟಿ ಮಂಜಪ್ಪನ ಜಮೀನು ಇರುವುದು ಎಂದರೆ ಸರಿಯಲ್ಲ.

ಮೌಖಿಕ ಪಾಲು ವಿಭಾಗವಾದಾಗ ನನ್ನ ದೊಡ್ಡಪ್ಪನಾದ ಸತ್ತರ್ ಸಾಬ್ ರವರು ಮೃತಪಟ್ಟಿದ್ದ ಕಾರಣ ಆತನ ಹೆಂಡತಿಯಾದ ಮರೀಯಾಮ್ ಬೀ ಇವರ ಹಿಸ್ತೆಗೆ 1 ಎಕರೆ 10 ಸೆಂಟ್ಸ್ ಹೋಗಿರುವುದು ಎಂದರೆ ಸರಿಯಲ್ಲ. ಸದರಿ ಮರೀಯಾಮ್ ಬೀ ಇವರ ಹಿಸ್ತೆಗೆ ಹೋದ ಪೂರ್ವಕ್ಕೆ ಫಾತೀಮಾ ಬೀ ರವರ ಜಮೀನು, ಪಶ್ಚಿಮಕ್ಕೆ ಹುಸೇನ್ ಬೀ ರವರ ಜಮೀನು, ಉತ್ತರಕ್ಕೆ ತಳವಾರ ಬಿಜ್ಜಪ್ಪರವರ ಜಮೀನು, ದಕ್ಷಿಣಕ್ಕೆ ಕೊಡಿ ಹಳ್ಳಿ ಕೊಟ್ಟಿ ಮಂಜಪ್ಪನ ಜಮೀನು ಇರುವುದು ಎಂದರೆ ಸರಿಯಲ್ಲ. ಮೌಖಿಕ ಪಾಲು ವಿಭಾಗದಲ್ಲಿ 6 ಎಕರೆ 50 ಸೆಂಟ್ಸ್ ಜಮೀನಿನ ಪೈಕಿ 1 ಎಕರೆ 50 ಸೆಂಟ್ಸ್ ಜಮೀನು ಹುಸೇನ್ ಸಬ್ ರವರ ಹಿಸ್ಸೆಗೆ ಬಂದಿರುವುದು ಎಂದರೆ ಸರಿಯಲ್ಲ. ಅದರ ಪೂರ್ವಕ್ಕೆ ಮರೀಯಾಮ್ ಬೀ ಇವರ ಜಮೀನು, ಪಶ್ಚಿಮಕ್ಕೆ ಇಮಾಮ್ ಅಲಿ ಸಾಬ್ ರವರ ಜಮೀನು, ಉತ್ತರಕ್ಕೆ ತಳವಾರ ಬಿಜ್ಜಪ್ಪರವರ ಜಮೀನು, ದಕ್ಷಿಣಕ್ಕೆ ಕೊಡಿಹಳ್ಳಿ ಕೊಟ್ಟಿ ಮಂಜಪ್ಪನ ಜಮೀನು ಇರುವುದು ಎಂದರೆ ಸರಿಯಲ್ಲ.

ನನ್ನ ಚಿಕ್ಕಪ್ಪನಾದ 2 ನೇ ವಾದಿಯ ಹಿಸ್ಸೆಗೆ 6 ಎಕರೆ 50 ಸೆಂಟ್ಸ್ ಜಮೀನಿನ ಪೈಕಿ 70 ಸಂಟ್ಸ್ ಜಮೀನು ಮೌಖಿಕ ಪಾಲು ವಿಭಾಗದಲ್ಲಿ ಬಂದಿರುವುದು ಎಂದರೆ ಸರಿಯಲ್ಲ. ಸದರಿ ಜಮೀನಿನ ಪೂರ್ವಕ್ಕೆ ಹುಸೇನ್ ರವರ ಜಮೀನು ಇರುವುದು ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ಹೊಂಗಡಿ ಜಮೀನು ಇದೆ ಎಂದರೆ ಸರಿ. ಉತ್ತರಕ್ಕೆ ತಳವಾರ ಬಿಜ್ಜಪ್ಪರವರ

ಜಮೀನು ಇರುವುದು ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಕೊಡಿ ಹಳ್ಳಿ ಕೊಟ್ಟಿ ಮಂಜಪ್ಪನ ಜಮೀನು ಇರುವುದು ಎಂದರೆ ಸರಿಯಲ್ಲ.

ಮೌಖಿಕ ಪಾಲು ವಿಭಾಗದಲ್ಲಿ ನನ್ನ ದೊಡ್ಡಪ್ಪನಾದ ಸತ್ತಾರ್ ಸಾಬ್ ಇವರ ಹಿಸ್ಸೆಗೆ ಸರ್ವೇ ನಂ. 350/1 ರಲ್ಲಿ 5 ಎಕರೆ 10 ಸೆಂಟ್ಸ್ 65 ಸೆಂಟ್ಸ್ ಬಂದಿರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ. 350/1ರಲ್ಲಿ 1 ಎಕರೆ 65 ಸೆಂಟ್ಸ್ ಜಮೀನು ನನ್ನ ತಂದೆಯಾದ ಇಮಾಮ್ ಸಾಬ್ ರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ಸರ್ವೇ ನಂ. 350/1 ರಲ್ಲಿ ಎರಡು ಎಕರೆ 85 ಸೆಂಟ್ಸ್ ಜಮೀನು ಮೌಖಿಕ ಪಾಲುವಿಭಾಗದಲ್ಲಿ 2 ನೇ ವಾದಿಯಾದ ಇಮಾಮ್ ಅಲಿ ಸಾಬ್ ರವರ ಹಿಸ್ಸೆಗೆ ಬಂದಿದ್ದು, ಅದನ್ನು ಅವರೇ ಸಾಗುವಳಿ ಮಾಡುತ್ತಿರುವವರು ಎಂದರೆ ಸರಿ. ಖಾಸಿಂ ಸಾಬ್ ರವರ ಎಲ್ಲಾ ಮಕ್ಕಳು ಮೌಖಿಕ ಪಾಲು ವಿಭಾಗದ ಮುಖಾಂತರ ತಮ್ಮ ತಮ್ಮ ಹಿಸ್ಸೆಯಲ್ಲಿ ಇರುವವರು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೈಕಿ ನನ್ನ ತಂದೆ ಹಾಗೂ 2 ನೇ ವಾದಿಯಾದ ನನ್ನ ಚಿಕ್ಕಪ್ಪನ ಹಿಸ್ಸೆಗೆ ಬಂದ ಆಸ್ತಿಗಳನ್ನು ಹೊರತುಪಡಿಸಿ ಉಳಿದ ಆಸ್ತಿಗಳ ಮೇಲೆ ನನಗೆ ಹಾಗೂ ನನ್ನ 2 ನೇ ವಾದಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

2 ನೇ ವಾದಿ ಈ ಕೇಸಿನಲ್ಲಿ ವಿಚಾರಣೆಗೆ ಒಳಪಟ್ಟರೆ ನನಗೆ ತೊಂದರೆ ಇರುವುದಿಲ್ಲ. ವಾದ ಪತ್ರದಲ್ಲಿ ಹಾಗೂ ಸಾಕ್ಷಿ ಪ್ರಮಾಣ ಪತ್ರದಲ್ಲಿ ಪಾಲು ವಿಭಾವಾಗಿರುವುದಿಲ್ಲ ಎಂದು ಸುಳ್ಳಾಗಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆ ತೀರಿಕೊಂಡ ನಂತರ ಪ್ರತಿವಾದಿಗಳು ಅವರ ತಂದೆಯ ಭಾಗಕ್ಕೆ ಬಂದ 1 ಎಕರೆ 80 ಸೆಂಟ್ಸ್ ಜಮೀನಿನ ಸ್ವಾಧೀನ ಅನುಬೋಗದಲ್ಲಿರುವವರು ಎಂದರೆ ಸರಿಯಲ್ಲ. ಖಾಸಿಂಸಾಬ್‌ರವರ ಮಗನಾದ ಕರೀಂ ಸಾಬ್‌ನ ಮಕ್ಕಳನ್ನು ಹೊರತುಪಡಿಸಿ ಖಾಸಿಂ ಸಾಬ್ ರವರ ಇತರ ಮಕ್ಕಳ ವಾರಸುದಾರರು ಕೂಡ ಅವಶ್ಯಕ ಪಕ್ಷಗಾರರಾಗುವರು ಎಂದರೆ ಸರಿಯಲ್ಲ. ಸದರಿ ಇತರ ಮಕ್ಕಳ ವಾರಸುದಾರರು ಜೀವಂತ ಇದ್ದು ನಮ್ಮ ಗ್ರಾಮದಲ್ಲಿಯೇ ವಾಸವಿರುವರು ಎಂದರೆ ಸರಿ. ಕರೀಂ ಸಾಬ್ ರವರ ಮಕ್ಕಳಿಗೆ ತೊಂದರೆ ಕೊಡಲು ಅವರ ವಿರುದ್ಧ ನಾನು ಹಾಗೂ ನನ್ನ ಚಿಕ್ಕಪ್ಪ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

O.S.17/2015
P.W.2

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

16-01-2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**